

# ಕೋಕಣದ ದೇವಕಣ

■ ಪ್ರವೀಣ ಕುಲಕರ್ಣಿ

ಈ ಚಿತ್ರ ವೀಕ್ಷಣೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಈ ಅಜ್ಜಿಯನ್ನು ಮಹಾರಾಷ್ಟ್ರದಲ್ಲಿನ ಕೋಕಣದ (ಕೊಂಕಣ) ಒಂದು ದೇವಕಣ ಎಂದು ಕರೆಯಬಹುದೇನೋ. 'ಇರುವುದೆಲ್ಲವ ನೆನೆದು ಬಾರೆನೆಂಬುದನ್ನು ಬಿಡು, ಹರುಷಕ್ಕೆದೆ ದಾರಿ' ಎಂಬ ಡಿವಿಜಿಯವರ ವಾಣಿಯಂತೆ ಬಾಳಿ, ಬದುಕುತ್ತಿರುವವರು. ಅಂತಸ್ತು, ಜಾತಿ, ಮತ, ಪಂಥ ಯಾವುದನ್ನೂ ನೋಡದೆ ಪ್ರತಿಯೊಬ್ಬ ಮನುಷ್ಯ ಜೀವಿಯ ಮೇಲೆಯೂ ಏಕಪ್ರಕಾರವಾಗಿ ಪ್ರೀತಿಯ ಹೂಮಳೆ ಸುರಿಸುವವರು. ದುಡ್ಡಿಗಿಂತ ಮನುಷ್ಯ ಪ್ರೀತಿಗೆ, ಮಾನವೀಯತೆಗೆ ಬೆಲೆ ನೀಡುವವರು. ರಸ್ತೆ ಬದಿಯ ಕಲ್ಲಿನ ಮನೆಯಲ್ಲಿ ಸಂತೃಪ್ತ ಭಾವದಿಂದ ಜೀವನ ಸಾಗಿಸಿರುವ ಇವರು, ತಮ್ಮ ಸುತ್ತಲಿನ ಜಗಕೆಲ್ಲ ಅನ್ನಪೂರ್ಣೆ ಎಂದೇ ಹೆಸರಾದವರು. ರತ್ನಗಿರಿ ಜಿಲ್ಲೆಯ ವಾತುಲ ಎಂಬ ಪುಟ್ಟಗ್ರಾಮ ಇವರೂರು.

ಹೌದು, ಮೋಹಿನಿ ಚೌಹಾಣ್ ಎಂಬ ಅಜ್ಜಿಯ ವ್ಯಕ್ತಿತ್ವವೇ ಹಾಗಿದೆ. ಇಂದಿನ ಸಮಾಜದ ನಡುವಿನ ಚೊಕ್ಕ ಅಪರಂಜಿ ಅವರು. ಈ ಅಜ್ಜಿ ನಡೆಸುವ ತೃಪ್ತಿ ಖಾನಾವಳಿಗೆ ಹಸಿದು ಬಂದವರೆಲ್ಲ 'ಪ್ರಸಾದ' ಸ್ವೀಕರಿಸಿ, ಸಂತೃಪ್ತ ಭಾವದಿಂದ ಹೋಗುತ್ತಾರೆ. ಹೆಸರಿಗೆ ಖಾನಾವಳಿ ಇದಾದರೂ ಊಟಕ್ಕೆ ಬಂದವರಿಗೆಲ್ಲ ಇದು ಮನೆಯಂತೆಯೇ. ಮುಂಬೈ–ಗೋವಾ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಈ ಖಾನಾವಳಿಗೆ ಊಟಕ್ಕೆ ಬಂದವರೆಲ್ಲರೂ ಮೋಹಿನಿ ಅಜ್ಜಿ ಪಾಲಿಗೆ ಪರಿವಾರದವರೇ! ಹೀಗಾಗಿ ಅವರ ಹೊಟ್ಟೆಗೆ ಏನೊಂದೂ ತೊಂದರೆ ಆಗದಂತೆ ಊಟ ಮಾಡಿ, ಬಡಿಸುವ ಇರಾದೆ ಅಜ್ಜಿಯದು. ತಂಗಳದ ಯಾವ ಪದಾರ್ಥವನ್ನೂ ಊಟಕ್ಕೆ ಕೊಡಬಾರದು ಎಂಬ ಕಾಳಜಿ ಹೊಂದಿರುವ ಅವರು, ರೆಫ್ರಿಜರೇಟರ್ ಅನ್ನೇ ತರಿಸಿಲ್ಲ. ಪ್ರತಿದಿನ ಎಷ್ಟು ತರಕಾರಿ ಬೇಕಾಗುತ್ತದೋ ಅಷ್ಟನ್ನೇ ಸ್ಥಳೀಯ ಮಾರುಕಟ್ಟೆಯಿಂದ ತರಿಸುತ್ತಾರೆ. ರುಚಿಕರವಾದ ಮತ್ತು ಅಷ್ಟೇ ಪರಿಶುದ್ಧವಾದ ಊಟ ಕೊಡುವ ಕೈಂಕರ್ಯವನ್ನೂ ಅವರು ತೊಟ್ಟಿದ್ದಾರೆ. ಸಾರು, ಪಲ್ಯಗಳನ್ನು ಕಟ್ಟಿಗೆ ಒಲೆಯ ಮೇಲೆ ತಯಾರಿಸುವ ಅವರು, ಬಂದವರಿಗೆಲ್ಲ, ಬಂದ–ಬಂದಾಗಲೆಲ್ಲ ಬಿಸಿ ರೊಟ್ಟಿ ಮಾಡಿ ಉಣಬಡಿಸುತ್ತಾರೆ.

ತೃಪ್ತಿ ಖಾನಾವಳಿಯ ಊಟಕ್ಕೆ ಹೆಚ್ಚಿನ ದುಡ್ಡೇನೂ ಕೊಡಬೇಕಿಲ್ಲ. 'ಅಪ್ಪಾ, ಬಾರಪ್ಪ. ಮೊದಲು ಊಟ ಮಾಡು. ದೂರದಿಂದ ಹಸಿದು ಬಂದಿರುವೆ' ಎಂದು ಆತ್ಮೀಯತೆಯಿಂದ ಕರೆದು ಕೂರಿಸುತ್ತಾರೆ. ಜೇಬಿನಲ್ಲಿ ಒಂದು ರೂಪಾಯಿಯೂ ಇಲ್ಲ ಎಂದವರಿಗೂ ಇವರ ಖಾನಾವಳಿ ಬಾಗಿಲು ತೆರೆದಿರುತ್ತದೆ. 'ದೇವರು ಏನೂ ಕಡಿಮೆ ಮಾಡಿಲ್ಲ ಬಾರಪ್ಪ. ಇದು ನಿನ್ನದೇ ಮನೆ. ಊಟ ಮಾಡು' ಎಂದು ಕಾಳಜಿ ಮಾಡುತ್ತಾರೆ. ಕೆಂಪುಕಲ್ಲಿನ ಆ ಪುಟ್ಟ ಕಟ್ಟಡದ ಒಳಗೆ ಹೋದರೆ ಬಿಸಿಲಲ್ಲಿ ದಣಿದವರಿಗೆ ತಂಪಾದ ಹಿತಾನುಭವ. 'ಬನ್ನಿ, ನೀರು ಕುಡಿಯಿರಿ' ಎಂಬ ಉಪಚಾರ ಬೇರೆ. ಇಲ್ಲಿ ಆಡಂಬರದ ಊಟವೇನೂ ಸಿಗುವುದಿಲ್ಲ. ರೊಟ್ಟಿ–ಪಲ್ಯ, ಅನ್ನ–ಸಾರು, ಮಜ್ಜಿಗೆ ಮಾತ್ರ. ಆದರೆ, ಅದರ ಪ್ರತೀ ತುತ್ತಿನಲ್ಲಿ ಅಮೃತದ ಬನಿ ತುಂಬಿದೆ.

ಇದೆಲ್ಲ ಹೇಗೆ ಶುರುವಾಯಿತು ಅಜ್ಜಿ ಎಂದು ಕೇಳಿದರೆ, ರೊಟ್ಟಿ ತಟ್ಟುತ್ತಾ ಅಜ್ಜಿ ಹೇಳುವ ಮಾತುಗಳು ಹೃದಯವನ್ನೂ ಬೆಚ್ಚಗೆ ಮಾಡುತ್ತವೆ. ಸುಮಾರು ನಾಲ್ಕು ದಶಕಗಳ ಹಿಂದಿನ ಮಾತು. ಬೇಸಿಗೆಯಲ್ಲಿ ದಾರಿಹೋಕರು ಬಾಯಾರಿಕೆಯಿಂದ ಬಳಲಿ ರಸ್ತೆಬದಿಯ ಇವರ ಮನೆಯತ್ತ ಬರುತ್ತಿದ್ದರು. ಅವರ ದಾಹ ತಣಿಸಲೆಂದು ದೂರದ ಹಳ್ಳದಿಂದ ಈ ಅಜ್ಜಿ ಮತ್ತು ಪರಿವಾರದವರು ನೀರು ಹೊತ್ತು ತರುತ್ತಿದ್ದರು. ಹಾಗೊಮ್ಮೆ ದಾರಿಹೋಕರೊಬ್ಬರು ಇಲ್ಲಿ ವಿಶ್ರಾಂತಿ ಪಡೆದು, ನೀರು ತುಂಬಿಸಿಕೊಂಡು ಹೋಗುವಾಗ ಇಪ್ಪತ್ತು ರೂಪಾಯಿಯನ್ನು ನೀರಿನ ಹಂಡೆಯ ಕೆಳಗೆ ಇಟ್ಟುಹೋಗಿದ್ದರು. 'ಅಯ್ಯೋ, ನೀರು ಕೊಟ್ಟು ದುಡ್ಡು ತೆಗೆದುಕೊಳ್ಳಬೇಕೇ' ಎಂದು ಅಜ್ಜಿ ಕುಟುಂಬ ಮರುಗಿತು. ಈ ವಿಷಯ ಹಿರಿಯರ ಕಿವಿಗೆ ಬಿದ್ದಾಗ, ಬಂದವರಿಗೆ ಊಟದ ವ್ಯವಸ್ಥೆಯನ್ನೂ ಮಾಡಿ, ಪುಣ್ಯ ಕಟ್ಟಿಕೊಳ್ಳಿ ಎಂಬ ಸಲಹೆ ಬಂತು. ಹಾಗೆ ಶುರುವಾದ ತೃಪ್ತಿ ಖಾನಾವಳಿ 36 ವರ್ಷಗಳಿಂದ ನಡೆಯುತ್ತಿದೆ.

ಅಜ್ಜಿಯ ಖಾನಾವಳಿಯಲ್ಲಿ ಊಟಕ್ಕೆ ತುಂಬಾ ಕಡಿಮೆ ದುಡ್ಡು ನಿಗದಿ ಮಾಡಿದ್ದಾರೆ. ಅದನ್ನೂ ಕೊಟ್ಟೇ ತೀರಬೇಕೆಂಬ ಆಗ್ರಹವಿಲ್ಲ. 'ಇಷ್ಟೊಂದು ಕಡಿಮೆ ದರ ನಿಗದಿ ಮಾಡಿದ್ದೀರಿ. ಅದನ್ನೂ ಕೊಡಲೇಬೇಕೆಂಬ ನಿಯಮವಿಲ್ಲ. ಹೀಗಾದರೆ ನಿಮ್ಮ ಉಪಜೀವನ ಹೇಗೆ' ಎಂದು ಕೇಳಿದರೆ, 'ನಮ್ಮ ಜೀವನದ ಅಗತ್ಯಗಳು ಹೆಚ್ಚೇನೂ ಇಲ್ಲ. ಒಂದಿಷ್ಟು ದುಡ್ಡು ಹೇಗೂ ಬಂದೇ ಬರುತ್ತದೆ. ಹೊಲದಲ್ಲಿ ಜೋಳ–ಕಾಳು ಬೆಳೆಯುತ್ತದೆ. ಹೆಚ್ಚಿನ ದುಡ್ಡು ತೆಗೆದುಕೊಂಡು ನಾನು ತಾನೇ ಏನು ಮಾಡಬೇಕು' ಎಂದು ಕೇಳುತ್ತಾರೆ. ದಿನದ 24 ಗಂಟೆಗಳಲ್ಲಿ ನೀವು ಯಾವ ಹೊತ್ತಿಗೆ ಬಂದರೂ ಅಜ್ಜಿಯ ಒಲೆ ಉರಿಯಲು ಆರಂಭಿಸುತ್ತದೆ. ಹಸಿದ ಒಂದು ಜೀವಿಯೂ ತನ್ನ ಮನೆಯಿಂದ ಹಾಗೇ ಹೋಗಬಾರದು ಎಂಬ ತಪೋಭಾವ ಅವರದು. 30 ವರ್ಷಗಳಲ್ಲಿ ಅಜ್ಜಿ ಒಂದುದಿನವೂ ಊರುಬಿಟ್ಟು ಬೇರೆ ಕಡೆ ಹೋಗಿಲ್ಲ. 'ಏಕಜ್ಜಿ' ಎಂದು ಕೇಳಿದರೆ, 'ನಾನು ಎಲ್ಲಿಗಾದರೂ ಹೋಗದಿದ್ದರೆ ಅಲ್ಲಿಯ ಕಾರ್ಯಕ್ರಮ ಏನೂ ನಿಲ್ಲುವುದಿಲ್ಲ. ಆದರೆ, ನಾನು ಬೀಗ ಹಾಕಿಕೊಂಡು ಹೋದರೆ ಹಸಿದು ಬಂದವರು ಹಾಗೇ ವಾಪಸ್ ಹೋಗಬೇಕಾಗುತ್ತದೆ. ಹಾಗೆ ಹಸಿದವರನ್ನು ವಿಲವಿಲ ಎನಿಸಿದರೆ ನನ್ನ ಗುರುದೇವ ಮೆಚ್ಚುವುದಿಲ್ಲ' ಎನ್ನುತ್ತಾರೆ. ಇದ್ದ ವ್ಯವಸ್ಥೆಯಲ್ಲೇ ಸಂತೃಪ್ತವಾಗಿ ಜೀವನ ಸಾಗಿಸಿರುವ, ದಿನವಿಡೀ ದಣಿದರೂ ನೆಮ್ಮದಿಯ ಮುಖಭಾವ ಹೊತ್ತು, ಬಂದವರಿಗೆಲ್ಲ ತಾಯಿ ಹೃದಯದಿಂದ ಊಟ ಬಡಿಸುವ ಈ ಅಜ್ಜಿ ಕೋಕಣದ ದೇವಕಣವಲ್ಲದೆ ಮತ್ತೇನು?

ಅಜ್ಜಿಯ ಕುರಿತು ಅಥರ್ವ ಹರ್ಡಿಕರ್ ಎಂಬ ಮರಾಠಿ ಯೂಟ್ಯೂಬರ್ ಸುಂದರ ಸಾಕ್ಷ್ಯಚಿತ್ರ ಮಾಡಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65